ಲೈನ್‌ಮನ್ ಹುದ್ದೆಗಳನ್ನು ತುಂಬುವುದು

203 (1011); ಶ್ರೀ ಉಮೇಶ್ ವಿಶ್ವನಾಥ್ ಕತ್ತಿ (ಹುಕ್ಕೇರಿ)

ಅ) ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ವಿದ್ಯುತ್ ಲೈನ್‌ಮನ್‌ಗಳ ಕೊರತೆಯಿಂದ ಸಾರ್ವಜನಿಕರಿಗೆ ಅದರಲ್ಲೂ ಗ್ರಾಮೀಣ ಭಾಗದಲ್ಲಿ ತುಂಬಾ ತೊಂದರೆಯಾಗುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹೆಸ್ಕಾಂ ವ್ಯಾಪ್ತಿಯಲ್ಲಿ ಮಂಜೂರಾಗಿರುವ ಲೈನ್‌ಮನ್‌ಗಳ ಹುದ್ದೆಗಳೆಷ್ಟು ಮತ್ತು ಖಾಲಿ ಇರುವ ಹುದ್ದೆಗಳೆಷ್ಟು; ವಿಭಾಗವಾರು ಮಾಹಿತಿ ನೀಡುವುದು;

ಇ) ಖಾಲಿ ಇರುವ ಹುದ್ದೆಗಳನ್ನು ತುಂಬಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಡಿ. ಕೆ. ಶಿವಕುಮಾರ್ (ಇಂಧನ ಸಚಿವರು)

ಅ) ಹೌದು.

ಆ) ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿಯ ವ್ಯಾಪ್ತಿಯಲ್ಲಿ ಮಂಜೂರಾಗಿರುವ, ಕಾರ್ಯನಿರ್ವಹಿಸುತ್ತಿರುವ ಮತ್ತು ಖಾಲಿ ಇರುವ ಸಹಾಯಕ ಲೈನ್‌ಮನ್ ಹುದ್ದೆಗಳ ಸಂಖ್ಯೆಯ ವಿಭಾಗವಾರು ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

ಇ) ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿಯ ವ್ಯಾಪ್ತಿಯಲ್ಲಿ ಖಾಲಿ ಇರುವ 567 ಸಂಖ್ಯೆಯ ಸಹಾಯಕ ಮಾರ್ಗದಾಳುಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು 2011ರಲ್ಲಿ ಹೊರಡಿಸಲಾಗಿದ್ದ ಅಧಿಸೂಚನೆಯನ್ವಯ ಪ್ರಸ್ತುತ, ನೇಮಕಾತಿ ಪ್ರಕ್ರಿಯೆ ಜಾರಿಯಲ್ಲಿದೆ. ಸದರಿ ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿಗೆ ಮಂಜೂರಾಗಿರುವ ಇನ್ನೂ 165 ಸಹಾಯಕ ಮಾರ್ಗದಾಳು ಹುದ್ದೆಗಳ ನೇರ ನೇಮಕಾತಿಯನ್ನು ಹೈದರಾಬಾದ್–ಕರ್ನಾಟಕ ಪ್ರದೇಶದ ನೌಕರರಿಗೆ ಮೀಸಲಾತಿ ಹಾಗೂ ಜೇಷ್ಠತೆಯನ್ನು ಅಳವಡಿಸಿದ ನಂತರ ಕೈಗೊಳ್ಳಲಾಗುವುದು.

ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಉಮೇಶ್ ವಿಶ್ವನಾಥ್ ಕತ್ತಿ (ಹುಕ್ಕೇರಿ) ರವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 1011 ಕ್ಕೆ ಅನುಬಂಧ:

ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ವ್ಯಾಪ್ತಿಯಲ್ಲಿ ಮಂಜೂರಾಗಿರುವ, ಕಾರ್ಯನಿರ್ವಹಿಸುತ್ತಿರುವ ಮತ್ತು ಖಾಲಿ ಇರುವ ಸಹಾಯಕ ಲೈನ್‌ಮನ್ ಹುದ್ದೆಗಳ ಸಂಖ್ಯೆಯ ವಿಭಾಗವಾರು ವಿವರಗಳು ಈ ಕೆಳಕಂಡಂತಿವೆ:

ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ				
ಕ್ರ. ಸಂ.	ವಿಭಾಗದ ಹೆಸರು	ಮಂಜೂರಾದ ಹುದ್ದೆಗಳ ಸಂಖ್ಯೆ	ಕಾರ್ಯನಿರ್ವಹಿಸುತ್ತಿರುವ ಸಹಾಯಕ ಮಾರ್ಗದಾಳುಗಳ ಸಂಖ್ಯೆ	ಖಾಲಿಯಿರುವ ಹುದ್ದೆಗಳ ಸಂಖ್ಯೆ
1	ಹುಬ್ಬಳ್ಳಿ–ನಗರ ವಿಭಾಗ	81	34	47
2	ಹುಬ್ಬಳ್ಳಿ–ಗ್ರಾಮೀಣ ವಿಭಾಗ	87	18	69
3	ಧಾರವಾಡ–ಗ್ರಾಮೀಣ ವಿಭಾಗ	36	20	16
4	ಧಾರವಾಡ–ಗ್ರಾಮೀಣ ವಿಭಾಗ	70	14	56
5	ಗದಗ	173	37	136
6	ಹಾವೇರಿ	126	17	109
7	ರಾಣೇಬೆನ್ನೂರು	132	27	105
8	ಶಿರಸಿ	199	36	163
9	ಕಾರವಾರ	77	15	62
10	ಬೆಳಗಾವಿ–ನಗರ ವಿಭಾಗ	58	17	41
11	ಬೆಳಗಾವಿ–ಗ್ರಾಮೀಣ ವಿಭಾಗ	185	34	151

12	ಘಟಪ್ರಭಾ	110	21	89
13	ಬೈಲಹೊಂಗಲ್	178	39	139
14	ಚಿಕ್ಕೋಡಿ	75	20	55
15	ರಾಯಭಾಗ	76	0	76
16	ಅಥಣಿ	118	5	113
17	ಬಿಜಾಪೂರ	92	20	72
18	ಇಂಡಿ	136	2	134
19	ಬಸವನಬಾಗೇವಾಡಿ	93	30	63
20	ಬಾಗಲಕೋಟೆ	167	44	123
21	ಆಮಖಿಂಡಿ	126	4	122
22	ಮುಧೋಳ	101	9	92
	ಒಟ್ಟು	2496	463	2033

ಅಧ್ಯಕ್ಷರು: ಬೇಡಿಕೆ ಇದೆಯಲ್ಲ, ಅದರಲ್ಲಿಯೇ ಒಂದೆರಡು ಮಾತು ಗಳನ್ನು ಹೇಳಿದ್ದರೆ ಆಗಿ ಹೋಗುತ್ತಿತ್ತು. ಚರ್ಚೆ ಇರುವಾಗ ಮತ್ತೇಕೆ ಪ್ರಶ್ನೆ ಬೇಕು? ಉಮೇಶ್ ಕತ್ತಿಯವರ ಪರವಾಗಿ ನೀವೇ ಎರಡು ನಿಮಿಷ ಮಾತ ನಾಡಿ. ಆಯಿತು ಕೇಳಿರಿ.

ಪ್ರಶ್ನೆ ಸಂಖ್ಯೆ 1011

(ಉತ್ತರದ ಪ್ರತಿಯನ್ನು ಲಗತ್ತಿಸಿದೆ)

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ (ಅಥಣಿ) (ವಿ. ಉಮೇಶ್ ಕತ್ತಿರವರ ಪರವಾಗಿ): ಮಾನ್ಯ ಅಧ್ಯಕ್ಷರೆ, ತಮ್ಮ ಆದೇಶದಂತೆ ಈಗಾಗಲೇ ಬಜೆಟ್ ಬೇಡಿಕೆ ಮೇಲೆ ಮಾತನಾಡುವ ಸಂದರ್ಭದಲ್ಲಿ ವಿವರವಾಗಿ ನಾನು ಮಾಡು ತ್ತೇನೆ. ಈಗ ಕೊಟ್ಟಿರುವ ಉತ್ತರ ಸ್ವಲ್ಪಮಟ್ಟಿಗೆ ಸಮಾಧಾನಕರವಾಗಿದೆ ಎಂದು ಹೇಳಲು ಬಯಸುತ್ತೇನೆ.

ಅಧ್ಯಕ್ಷರು: ಮಾನಪ್ಪ ಡಿ. ವಜ್ಜಲ್ ರವರ ಪ್ರಶ್ನೆ ತೋಟಗಾರಿಕಾ ಇಲಾಖೆಯಿಂದ ವರ್ಗಾವಣೆಯಾಗಿದೆ.

214 (2100) ಶ್ರೀ ಕೆ. ವಸಂತ ಬಂಗೇರ (ಬೆಳ್ತಂಗಡಿ)

215 (2432) ಶ್ರೀಮತಿ ಶಾರದಾ ಪೂರ್ಯನಾಯ್ಕ, ಶಿವಮೊಗ್ಗ ಗ್ರಾಮಾಂತರ.

216 (3111) ಶ್ರೀ ಮಾನಪ್ಪ ಡಿ. ವಜ್ಜಲ್ (ಲಿಂಗಸಗೂರು)

217 (2663) ಶ್ರೀ ಮಹೇಶ್ ಎಸ್. ಆರ್. (ಕೃಷ್ಣರಾಜನಗರ)

218 (3068) ಡಾ; ಕೆ. ಸುಧಾಕರ್ (ಚಿಕ್ಕಬಳ್ಳಾಪುರ)

219 (2438) ಶ್ರೀ ವಿನಯ್ ಕುಲಕರ್ಣಿ (ಧಾರವಾಡ)

220 (2645) ಶ್ರೀ ಶ್ರೀನಿವಾಸ್ ಎಸ್. ಆರ್. (ವಾಸು) (ಗುಬ್ಬಿ)

221 (2864) ಶ್ರೀ ಮಂಜುನಾಥಗೌಡ ಕೆ. ಎಸ್. (ಮಾಲೂರು)

ಸಹಕಾರ ಸಂಘ ಹಾಗೂ ಅದರಲ್ಲಿನ ಸದಸ್ಯರ ವಿವರ

224 (1587); ಶ್ರೀ ಜಗದೀಶ ಕುಮಾರ ಆರ್. (ಹೆಬ್ಬಾಳ)

ಅ) ಹೆಬ್ಬಾಳ ವಿಧಾನ ಸಭಾ ಕ್ಷೇತ್ರದ 8 ವಾರ್ಡುಗಳ ವ್ಯಾಪ್ತಿಯಲ್ಲಿರುವ ಸಹಕಾರ ಸಂಘಗಳೆಷ್ಟು ಹಾಗೂ ಅವುಗಳ ಸದಸ್ಯರ ಸಂಪೂರ್ಣ ಮಾಹಿತಿಯನ್ನು ಒದಗಿಸುವುದು;

ಆ) ಇಲ್ಲದಿದ್ದ ಪಕ್ಷದಲ್ಲಿ, ಹೊಸದಾಗಿ ಸಹಕಾರ ಸಂಘಗಳನ್ನು ಮಾಡಿ ಸಾರ್ವಜನಿಕರು ಸರ್ಕಾರದ ಯೋಜನೆಗಳನ್ನು ಪಡೆಯಲು ಅನುವು ಮಾಡಲು ಸರ್ಕಾರವು ಬದ್ಧವಾಗಿದೆಯೇ?